# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಎಂಯು/53/ಇಎಸ್‌ಟಿ(2)/2016–17 ಕುಲಸಚಿವರ ಕಚೇರಿ

ಮಂಗಳಗಂಗೋತ್ರಿ – 574 199

ದಿನಾಂಕ: 09.06.2017

## ನೇಮಕಾತಿ ಅಧಿಸೂಚನೆ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಳೀಯ ವೃಂದ(ಹೈದ್ರಾಬಾದ್–ಕರ್ನಾಟಕ)ದಲ್ಲಿ ಲಭ್ಯವಿರುವ ಬೋಧಕೇತರ ಹುದ್ದೆಗಳನ್ನು ತುಂಬಲು ಅರ್ಹ ಸ್ಥಳೀಯ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸುವ ಕುರಿತು.

ಉಲ್ಲೇಖ:
1. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ. 08 ಸೆಹಿಮ 95 ದಿನಾಂಕ 20.06.1995.
2. ಸರ್ಕಾರಿ ಆದೇಶ ಸಂಖ್ಯೆ. ಸಿ.ಆ.ಸು.ಇ. 53 ಸೆನೆನಿ 2007ದಿನಾಂಕ 04.01.2008.
3. ಸರ್ಕಾರಿ ಆದೇಶ ಸಂಖ್ಯೆ: ಸಿ.ಆ.ಸು.ಇ. 21 ಸೆಹಿಮ 90 ದಿನಾಂಕ 16.11.1995.
4. ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 06 ಪಿಎಲ್‌ಎಕ್ಸ್ 2012 ದಿನಾಂಕ 06.11.2013.
5. ಈ ಕಚೇರಿ ಅಧಿಸೂಚನೆ ಸಂಖ್ಯೆ. ಎಂಯು/55/ಇಎಸ್‌ಟಿ(2)/2013–14 ದಿನಾಂಕ 19.11.2014, 22.12.2016 ಮತ್ತು 24.05.2017.
6. ಸಿಂಡಿಕೇಟ್ ಅನುಮೋದನೆ ಸಂಖ್ಯೆ. ಸಿಬ್ಬಂದಿ:ವಿ.ಸ:1:7(2017) ದಿನಾಂಕ 10.02.2017.
7. ಕುಲಪತಿಗಳ ಆದೇಶ ದಿನಾಂಕ 10.02.2017.
8. ಸರ್ಕಾರಿ ಪತ್ರ ಸಂಖ್ಯೆ. ಇಡಿ 334 ಯುಆರ್‌ಸಿ 2016 ದಿನಾಂಕ 03.04.2017.

******

ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಳೀಯ ವೃಂದದಲ್ಲಿ(ಹೈದ್ರಾಬಾದ್–ಕರ್ನಾಟಕ)ವಿವಿಧ ಬೋಧಕೇತರ ಹುದ್ದೆಗಳನ್ನು ಉಲ್ಲೇಖ(4)ರ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲು ಅನುಮೋದನೆ ನೀಡಲಾಗಿರುತ್ತದೆ. ಉಲ್ಲೇಖ(5) ರ ಅಧಿಸೂಚನೆ/ತಿದ್ದುಪಡಿ ಅಧಿಸೂಚನೆಯಲ್ಲಿ ವಿವಿಧ ಹುದ್ದೆಗಳನ್ನು ಗುರುತಿಸಿ ನಿಗದಿಪಡಿಸಿ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಲಾಗಿರುತ್ತದೆ. ಅನುಚ್ಛೇದ 371 ಜೆ ರಂತೆ ಹೊರಡಿಸಲಾದ ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 13 ರಂತೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳಿಂದ ಅರ್ಜಿ ಪಡೆದು ಆಯ್ಕೆಗೆ ಅನುಸಾರ ತತ್ಸಂಬಂಧ ವೃಂದಗಳಲ್ಲಿ ಹಂಚಿಕೆ ತರುವಾಯ ಲಭ್ಯವಿರುವ ವಿವಿಧ ವೃಂದದವರಿಂದ ಸ್ಥಳೀಯ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ 10 (ಹತ್ತು) ಪ್ರತಿಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಅವಶ್ಯ ದಾಖಲೆಗಳೊಂದಿಗೆ **ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574 199, ದ.ಕ., ಕರ್ನಾಟಕ ಇವರಿಗೆ ದಿನಾಂಕ 10.07.2017ರಂದು ಸಂಜೆ 5.00 ಗಂಟೆಯ ಒಳಗಾಗಿ** ನೋಂದಾಯಿತ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸುವಂತೆ ಸೂಚಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು ಮತ್ತು ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ರೋಸ್ಟರ್ ಪ್ರಕಾರ ಹುದ್ದೆಗಳ ವರ್ಗೀಕರಣ |
|---|---|---|---|
| 1. | ರೇಡಿಯೇಶನ್ ಫಿಸಿಸ್ಟ್<br>15,600–39,100/– + ಎಜಿಪಿ 6,000/–<br>(ಯುಜಿಸಿ ವೇತನ ಶ್ರೇಣಿ) | 01 | ಮೀಸಲು ರಹಿತ |
| 2. | ಸಹಾಯಕ ಗ್ರಂಥಪಾಲಕ<br>15,600–39,100/–+ ಎಜಿಪಿ 6,000/–<br>(ಯುಜಿಸಿ ವೇತನ ಶ್ರೇಣಿ) | 02 | ಸಾಮಾನ್ಯ –01<br>ಪರಿಶಿಷ್ಟ ಜಾತಿ –01 |
| 3. | ಸಹಾಯಕ ಅಭಿಯಂತರ<br>22800–600–24600–700–28800–800–33600–900–39000–1050–43200/– | 02 | ಸಾಮಾನ್ಯ – 01<br>ಪರಿಶಿಷ್ಟ ಜಾತಿ – 01 |
| 4. | ಕ್ಯುರೇಟರ್<br>22800–600–24600–700–28800–800–33600–900–39000–1050–43200/– | 01 | ಮೀಸಲು ರಹಿತ |
| 5. | ಕೋಚ್<br>21600–600–24600–700–28800–800–33600–900–39000–1050–40050/–<br>(ರಾಜ್ಯ ವೇತನ ಶ್ರೇಣಿ) | 01 | ಮೀಸಲು ರಹಿತ |

| | | | |
|---|---|---|---|
| 6. | ಸ್ಟಾಫ್ ನರ್ಸ್<br>17650–450–19000–500–21000–600–24600–700–28800–800–32000/– | 01 | ಮೀಸಲು ರಹಿತ |
| 7. | ಕಂಪ್ಯೂಟರ್ ಆಪರೇಟರ್<br>17650–450–19000–500–21000–600–24600–700–28800–800–32000/– | 01 | ಮೀಸಲು ರಹಿತ |
| 8. | ಪ್ರಥಮ ದರ್ಜೆ ಸಹಾಯಕ<br>16000–400–17200–450–19000–500–21000–600–24600–700–28800–800–29600/– | 02 | ಸಾಮಾನ್ಯ – 01<br>ಪರಿಶಿಷ್ಟ ಜಾತಿ – 01 |
| 9. | ಸ್ಟೋರ್ ಕೀಪರ್<br>16000–400–17200–450–19000–500–21000–600–24600–700–28800–800–29600/– | 01 | ಮೀಸಲು ರಹಿತ |
| 10. | ಪ್ರಯೋಗಾಲಯ ತಂತ್ರಜ್ಞ<br>14550–350–15600–400–17200–450–19000–500–21000–600–24000–700–26700/– | 01 | ಮೀಸಲು ರಹಿತ |
| 11. | ಪ್ರಯೋಗಾಲಯ ಸಹಾಯಕ<br>14550–350–15600–400–17200–450–19000–500–21000–600–24000–700–26700/– | 01 | ಮೀಸಲು ರಹಿತ |
| 12. | ಸ್ಯಾನಿಟರಿ ಇನ್ಸ್‌ಪೆಕ್ಟರ್<br>16000–400–17200–450–19000–500–21000–600–24600–700–28800–800–29600/– | 01 | ಮೀಸಲು ರಹಿತ |
| 13. | ದ್ವಿತೀಯ ದರ್ಜೆ ಸಹಾಯಕ<br>11600–200–12000–250–13000–300–14200–350–15600–400–17200–450–19000–500–21000/– | 05 | ಸಾಮಾನ್ಯ – 02 (01 – ಮಹಿಳೆ)<br>ಪರಿಶಿಷ್ಟ ಜಾತಿ –01<br>ಪರಿಶಿಷ್ಟ ಪಂಗಡ–01<br>ಪ್ರವರ್ಗ I –01 |
| 14. | ಬೆರಳಚ್ಚುಗಾರ–ಕಂ–ಗುಮಾಸ್ತ<br>11600–200–12000–250–13000–300–14200–350–15600–400–17200–450–19000–500–21000/– | 03 | ಸಾಮಾನ್ಯ – 01<br>ಪರಿಶಿಷ್ಟ ಜಾತಿ – 01<br>ಪರಿಶಿಷ್ಟ ಪಂಗಡ– 01 |
| 15. | ಪಂಪ್ ಆಪರೇಟರ್<br>11600–200–12000–250–13000–300–14200–350–15600–400–17200–450–19000–500–21000/– | 01 | ಮೀಸಲು ರಹಿತ |
| 16. | ಅಸಿಸ್ಟೆಂಟ್ ಕುಕ್<br>10400–200–12000–250–13000–300–14200–350–15600–400–16400/– | 01 | ಮೀಸಲು ರಹಿತ |
| 17. | ಬೈಂಡರ್<br>10400–200–12000–250–13000–300–14200–350–15600–400–16400/– | 01 | ಮೀಸಲು ರಹಿತ |

| | | | |
|---|---|---|---|
| 18. | ಕಿಚನ್ ಅಸಿಸ್ಟೆಂಟ್ 9600–200–12000–250–13000–300–14200–350–14550/- | 01 | ಮೀಸಲು ರಹಿತ |

ಮೇಲೆ ತಿಳಿಸಿದ ಹುದ್ದೆಗಳ ವರ್ಗೀಕರಣವು ಬದಲಾವಣೆಯಾಗಲೂಬಹುದು.

**ವಿದ್ಯಾರ್ಹತೆ:**

**ರೇಡಿಯೇಶನ್ ಫಿಸಿಸ್ಟ್**

1. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ನ್ಯೂಕ್ಲಿಯರ್ ಫಿಸಿಕ್ಸ್/ರೇಡಿಯೇಶನ್ ಪಿಸಿಕ್ಸ್ ಎಂಬ ವಿಶೇಷ ವಿಷಯದೊಂದಿಗೆ ಎಂ.ಎಸ್ಸಿ. ಭೌತಶಾಸ್ತ್ರ ಪದವಿಯಲ್ಲಿ ಪ್ರಥಮ/ಉನ್ನತ ದ್ವಿತೀಯ ದರ್ಜೆ ಶ್ರೇಣಿಯಲ್ಲಿ ತೇರ್ಗಡೆ ಮತ್ತು ಸಂಶೋಧನಾ ಪ್ರಕಟಣೆಯೊಂದಿಗೆ ಅನುಭವ.
2. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ ಇಲ್ಲವೇ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಅಂಗೀಕೃತಗೊಂಡ ಇತರ ಯಾವುದೇ ಸಂಸ್ಥೆಯಿಂದ ರಾಷ್ಟ್ರೀಯ/ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆಯಲ್ಲಿ (NET/SLET) ಉತ್ತೀರ್ಣರಾಗಿರತಕ್ಕದ್ದು.
3. ಯುಜಿಸಿ ರೆಗ್ಯುಲೇಶನ್ 2009 ರಲ್ಲಿ ನಿಗದಿಪಡಿಸಿದಂತೆ, ಎಂ.ಫಿಲ್./ಪಿಹೆಚ್.ಡಿ ಪದವಿಯನ್ನು ಪ್ರವೇಶಾತಿ, ನೋಂದಾವಣೆ, ಕೋರ್ಸು ವರ್ಕ್ ಮತ್ತು ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆ ಮೂಲಕ ಪಡೆದವರು NET/SLET ಅರ್ಹತೆಯಿಂದ ವಿನಾಯಿತಿಗೆ ಅರ್ಹರಾಗಿರುತ್ತಾರೆ.

**ಸಹಾಯಕ ಗ್ರಂಥಪಾಲಕ:**

1. ಗ್ರಂಥಾಲಯ ವಿಜ್ಞಾನ/ಮಾಹಿತಿ ವಿಜ್ಞಾನ/ಡಾಕ್ಯುಮೆಂಟೇಶನ್‌ನಲ್ಲಿ ಸ್ನಾತಕೋತ್ತರ ಪದವಿ ಅಥವಾ ತತ್ಸಮಾನ ಪ್ರೊಫೆಶನಲ್ ಡಿಗ್ರಿಯೊಂದಿಗೆ ಕನಿಷ್ಟ ಶೇಕಡಾ 55 ಅಂಕಗಳು ಅಥವಾ ಅದರ ತತ್ಸಮಾನ ಗ್ರೇಡ್ ಹಾಗೂ ಸಮರ್ಪಕವಾದ ಶೈಕ್ಷಣಿಕ ದಾಖಲೆಯನ್ನು ಹೊಂದಿರತಕ್ಕದ್ದು.
2. ವಿಶ್ವವಿದ್ಯಾನಿಲಯ ಧನ ಸಹಾಯ ಆಯೋಗದಿಂದ ಇಲ್ಲವೇ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದಿಂದ ಅಂಗೀಕೃತಗೊಂಡ ಇತರ ಯಾವುದೇ ಸಂಸ್ಥೆಯಿಂದ ರಾಷ್ಟ್ರೀಯ/ರಾಜ್ಯ ಮಟ್ಟದ ಅರ್ಹತಾ ಪರೀಕ್ಷೆಯಲ್ಲಿ (NET/SLET) ಉತ್ತೀರ್ಣರಾಗಿರತಕ್ಕದ್ದು.
3. ಯುಜಿಸಿ ರೆಗ್ಯುಲೇಶನ್ 2009 ರಲ್ಲಿ ನಿಗದಿಪಡಿಸಿದಂತೆ, ಎಂ.ಫಿಲ್./ಪಿಹೆಚ್.ಡಿ ಪದವಿಯನ್ನು ಪ್ರವೇಶಾತಿ, ನೋಂದಾವಣೆ, ಕೋರ್ಸು ವರ್ಕ್ ಮತ್ತು ಬಾಹ್ಯ ಮೌಲ್ಯಮಾಪನ ಪ್ರಕ್ರಿಯೆ ಮೂಲಕ ಪಡೆದವರು NET/SLET ಅರ್ಹತೆಯಿಂದ ವಿನಾಯಿತಿಗೆ ಅರ್ಹರಾಗಿರುತ್ತಾರೆ.

**ಸಹಾಯಕ ಅಭಿಯಂತರರು :**

1. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪ್ರಥಮ ಅಥವಾ ದ್ವಿತೀಯ ದರ್ಜೆಯಲ್ಲಿ ಬಿ.ಇ. ಪದವಿ.
2. ಸರಕಾರಿ ಇಲಾಖೆ/ಶಾಸನಬದ್ಧ ಸಂಸ್ಥೆಯಲ್ಲಿ ಸಂಬಂಧಪಟ್ಟ ಕಾರ್ಯಕ್ಷೇತ್ರದಲ್ಲಿ ಎರಡು ವರ್ಷಗಳ ಕಾರ್ಯಾನುಭವ ಹೊಂದಿರತಕ್ಕದ್ದು.

ಅಥವಾ

3. ಕರ್ನಾಟಕ ಸರ್ಕಾರದ ಪಾಲಿಟೆಕ್ನಿಕ್ ಅಥವಾ ಅಂಗೀಕೃತ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಪ್ರಥಮ ಅಥವಾ ದ್ವಿತೀಯ ಶ್ರೇಣಿಯಲ್ಲಿ ಇಲೆಕ್ಟ್ರಿಕಲ್/ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮ ಪದವಿ ಅಥವಾ ಇತರೆ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.
4. ಸರಕಾರ/ಸರಕಾರದಿಂದ ಮಾನ್ಯತೆ ಪಡೆದಂತಹ ಸಂಸ್ಥೆ (Statutory body) ಗಳಲ್ಲಿ ಕನಿಷ್ಟ ಎರಡು ವರ್ಷಗಳ ಅನುಭವ ಅಪೇಕ್ಷಣೀಯ.
5. ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ.

**ಕ್ಯುರೇಟರ್**

1. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಜಾನಪದದಲ್ಲಿ ಸ್ನಾತಕೋತ್ತರ ಪದವಿ

ಅಥವಾ

ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಕನ್ನಡ ಸ್ನಾತಕೋತ್ತರ ಪದವಿಯೊಂದಿಗೆ ಜಾನಪದದಲ್ಲಿ ಎಂ.ಪಿಲ್. ಪದವಿ.

ಅಥವಾ

ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ತುಳು/ಜಾನಪದ ಆಯ್ಕೆ ವಿಷಯದೊಂದಿಗೆ ಕನ್ನಡದಲ್ಲಿ ಸ್ನಾತಕೋತ್ತರ ಪದವಿ.

2. ಜಾನಪದದಲ್ಲಿ ಕನಿಷ್ಠ ಎರಡು ವರ್ಷಗಳ ಕ್ಷೇತ್ರ ಕಾರ್ಯ ಮಾಡಿದ ಅನುಭವ.

**ಅಪೇಕ್ಷಿತ:**

ಜಾನಪದ/ಸಾಂಸ್ಕೃತಿಕ ಮ್ಯೂಸಿಯಂ ಅಥವಾ ಪತ್ರಾಗಾರದಲ್ಲಿ ಕೆಲಸ ಮಾಡಿದ ಅನುಭವ.

**ಕೋಚ್**

ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ದೈಹಿಕ ಶಿಕ್ಷಣದಲ್ಲಿ ಪದವಿ ಹಾಗೂ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್, ಪಾಟಿಯಾಲ ಇಲ್ಲಿ ಒಂದು ವರ್ಷದ ಸರ್ಟಿಫಿಕೇಟ್ ಕೋರ್ಸ್

**ಸ್ಟಾಫ್ ನರ್ಸ್:**

1. ಕರ್ನಾಟಕ ಸರಕಾರದ ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆ ತೇರ್ಗಡೆ ಹಾಗೂ ಸರಕಾರ/ಸರಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ $3^1/_2$ ವರ್ಷ ಅವಧಿಯ ಸಿಕ್ ನರ್ಸಿಂಗ್ (Sick Nursing) ಮತ್ತು ಮಿಡ್ವೈಫರಿ ಕೋರ್ಸ್ (Midwifery Course) ನಲ್ಲಿ ತೇರ್ಗಡೆ.
2. ಇಂಡಿಯನ್ ನರ್ಸಿಂಗ್ ಕೌನ್ಸಿಲ್‌ನಲ್ಲಿ ನೋಂದಾವಣೆ ಹೊಂದಿರತಕ್ಕದ್ದು.
3. ಆಸ್ಪತ್ರೆಯಲ್ಲಿ ನರ್ಸ್ ಆಗಿ ಕೆಲಸ ಮಾಡಿದ ಅನುಭವವಿರುವವರಿಗೆ ಆದ್ಯತೆ ನೀಡಲಾಗುವುದು.

**ಕಂಪ್ಯೂಟರ್ ಆಪರೇಟರ್:**

ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ. ಪದವಿ ಮತ್ತು ಡಿಪ್ಲೋಮಾ ಇನ್ ಕಂಪ್ಯೂಟರ್ ಅಪ್ಲಿಕೇಶನ್‌ನಲ್ಲಿ ತೇರ್ಗಡೆ ಹೊಂದಿರತಕ್ಕದ್ದು.

**ಪ್ರಥಮ ದರ್ಜೆ ಸಹಾಯಕ:**

1. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದ ಪದವಿ ಪಡೆದಿರತಕ್ಕದ್ದು.
2. ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ.

**ಸ್ಟೋರ್ ಕೀಪರ್:**

1. ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ರಸಾಯನ ಶಾಸ್ತ್ರ ಐಚ್ಛಿಕ/ಪ್ರಮುಖ ವಿಷಯವಾಗಿ ಬಿ.ಎಸ್ಸಿ. ಪದವಿ ತೇರ್ಗಡೆ.
2. ಮಾನ್ಯತೆ ಹೊಂದಿದ ಸಂಸ್ಥೆಯಿಂದ ಕನಿಷ್ಠ 6 ತಿಂಗಳ ಅವಧಿಯ ಕಂಪ್ಯೂಟರ್ ಸರ್ಟಿಫಿಕೇಟ್ ಕೋರ್ಸಿನಲ್ಲಿ ತೇರ್ಗಡೆ ಹೊಂದಿರತಕ್ಕದ್ದು.

   **ಅಪೇಕ್ಷಿತ:**

   ಸರ್ಕಾರ ಅಥವಾ ಮಾನ್ಯತೆ ಪಡೆದಂತಹ ಸಂಸ್ಥೆಯಲ್ಲಿ ಸ್ಟೋರ್ ಕೀಪಿಂಗ್‌ನಲ್ಲಿ ಕನಿಷ್ಠ ಎರಡು ವರ್ಷಗಳ ಕೆಲಸ ಮಾಡಿದ ಅನುಭವ.

**ಪ್ರಯೋಗಾಲಯ ತಂತ್ರಜ್ಞ:**

1. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರತಕ್ಕದ್ದು.
2. ಸರಕಾರ/ಸರಕಾರದಿಂದ ಅಂಗೀಕೃತಗೊಂಡ ಸಂಸ್ಥೆಯಿಂದ(Medical Laboratory Technology) ಕೋರ್ಸು ತೇರ್ಗಡೆ.

**ಪ್ರಯೋಗಾಲಯ ಸಹಾಯಕ:**

ರಸಾಯನಶಾಸ್ತ್ರ ಐಚ್ಛಿಕ/ಪ್ರಮುಖ ವಿಷಯವಾಗಿ ಬಿ.ಎಸ್ಸಿ. ಪದವಿಯಲ್ಲಿ ತೇರ್ಗಡೆ.

**ಅಪೇಕ್ಷಿತ:**

ಸರಕಾರ/ ಸರಕಾರದಿಂದ ಮಾನ್ಯತೆ ಪಡೆದಂತಹ ಸಂಸ್ಥೆಗಳಲ್ಲಿ ಪ್ರಯೋಗಾಲಯ ಮತ್ತು ಉಪಕರಣಗಳ ನಿರ್ವಹಣೆಯ ಅನುಭವ.

**ಸ್ಯಾನಿಟರಿ ಇನ್ಸ್‌ಪೆಕ್ಟರ್:**

1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.
2. ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಒಂದು ವರ್ಷದ ಆರೋಗ್ಯ ಇನ್ಸ್‌ಪೆಕ್ಟರ್ ತರಬೇತಿ ಕೋರ್ಸು.

**<u>ದ್ವಿತೀಯ ದರ್ಜೆ ಸಹಾಯಕ:</u>**

1. ಪಿ.ಯುಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.
2. ವಿಶ್ವವಿದ್ಯಾನಿಲಯವು ಆಯೋಜಿಸುವ "ಕನ್ನಡ ಭಾಷಾ ಪರಿಜ್ಞಾನ" ಪರೀಕ್ಷೆಯ ಸರ್ಟಿಫಿಕೇಟ್ ಕೋರ್ಸಿನಲ್ಲಿ ಉತ್ತೀರ್ಣರಾಗಿರತಕ್ಕದ್ದು ಅಥವಾ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡವನ್ನು ಒಂದು ಭಾಷಾ ವಿಷಯವನ್ನಾಗಿ ಆಯ್ದುಕೊಂಡಿರತಕ್ಕದ್ದು.
3. ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ.

**<u>ಬೆರಳಚ್ಚುಗಾರ–ಕಂ–ಗುಮಾಸ್ತ:</u>**

1. ಪಿ.ಯುಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.
2. ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿ ನಡೆಸುವ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಸೀನಿಯರ್ ಗ್ರೇಡ್ ಬೆರಳಚ್ಚು ಪರೀಕ್ಷೆಗಳಲ್ಲಿ ತೇರ್ಗಡೆ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.
3. ಕಂಪ್ಯೂಟರ್ ಜ್ಞಾನ ಅಪೇಕ್ಷಣೀಯ.

**<u>ಪಂಪ್ ಆಪರೇಟರ್:</u>**

1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.
2. ಕರ್ನಾಟಕ ಸರ್ಕಾರದಿಂದ ಅಂಗೀಕೃತಗೊಂಡ ಸಂಸ್ಥೆಯಿಂದ ಆರು ತಿಂಗಳ ಮೆಕ್ಯಾನಿಕಲ್ ಸರ್ಟಿಫಿಕೇಟ್ ಕೋರ್ಸ್ ತೇರ್ಗಡೆ.
3. ಸರಕಾರ/ಸರಕಾರದಿಂದ ಮಾನ್ಯತೆ ಪಡೆದಂತಹ ಸಂಸ್ಥೆ (Statutory body) ಗಳಲ್ಲಿ ಸಂಬಂಧಪಟ್ಟ ಕ್ಷೇತ್ರದಲ್ಲಿ ಕನಿಷ್ಟ ಎರಡು ವರ್ಷಗಳ ಅನುಭವ.

**<u>ಅಸಿಸ್ಟೆಂಟ್ ಕುಕ್</u>**

1. ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.
2. ಪ್ರತಿಷ್ಠಿತ ಹಾಸ್ಟೆಲ್/ಸಂಸ್ಥೆಯಲ್ಲಿ ಮೂರು ವರ್ಷ ಅಡುಗೆ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರತಕ್ಕದ್ದು ಅಥವಾ ಅಡುಗೆಯಲ್ಲಿ ಪರಿಣತಿ ಬಗ್ಗೆ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಪಡೆದಿರತಕ್ಕದ್ದು.

**<u>ಬೈಂಡರ್:</u>**

ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ.

**<u>ಅಪೇಕ್ಷಿತ:</u>** ಮುದ್ರಣಾಲಯದಲ್ಲಿ ಎರಡು ವರ್ಷ ಬೈಂಡಿಂಗ್ ಕಾರ್ಯ ಮಾಡಿರುವ ಅನುಭವ ಹೊಂದಿರತಕ್ಕದ್ದು.

**<u>ಕಿಚನ್ ಅಸಿಸ್ಟೆಂಟ್:</u>**

1. ಐದನೇ ತರಗತಿಯಲ್ಲಿ ತೇರ್ಗಡೆ.
2. ಪ್ರತಿಷ್ಠಿತ ಹಾಸ್ಟೆಲ್/ಸಂಸ್ಥೆಯಲ್ಲಿ ಸಂಬಂಧಪಟ್ಟ ಕ್ಷೇತ್ರದಲ್ಲಿ ಎರಡು ವರ್ಷಗಳ ಅನುಭವ ಹೊಂದಿರತಕ್ಕದ್ದು. ಅಥವಾ ಅಡುಗೆಯಲ್ಲಿ ಪರಿಣತಿ ಬಗ್ಗೆ ಮಾನ್ಯತೆ ಪಡೆದಂತಹ ಸಂಸ್ಥೆಯಿಂದ ಪ್ರಮಾಣ ಪತ್ರ ಪಡೆದಿರತಕ್ಕದ್ದು.

**<u>ವಯೋಮಿತಿ:</u>**

ಕನಿಷ್ಟ – 18 ವರ್ಷ ಗರಿಷ್ಠ –40 ವರ್ಷಗಳು (ಪ.ಜಾ./ಪ.ಪಂ./ಪ್ರವರ್ಗ –I)
ಗರಿಷ್ಠ –38 ವರ್ಷಗಳು (ಪ್ರವರ್ಗ II (a), II (b), III (a), III (b))
ಗರಿಷ್ಠ – 35 ವರ್ಷಗಳು (ಸಾಮಾನ್ಯ ವರ್ಗ)

ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಸಶಸ್ತ್ರ ಕೇಂದ್ರದಳದಲ್ಲಿ ಸಲ್ಲಿಸಿದ ಸೇವೆಯ ಜೊತೆಗೆ ಮೂರು ವರ್ಷಗಳ ವಯೋಮಿತಿ ಸಡಿಲಿಕೆಗೆ(ಗರಿಷ್ಠ 45 ವರ್ಷ ವಯೋಮಿತಿ) ಅರ್ಹರು.

**<u>ಅರ್ಜಿ ಶುಲ್ಕ:</u>** ರೂ. 500/– (ಪ.ಜಾ./ಪ.ಪಂ. ರೂ. 250/–)
ಅಂಗವಿಕಲ ಮತ್ತು ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕದಲ್ಲಿ ಪೂರ್ಣ ವಿನಾಯಿತಿ ಇರುತ್ತದೆ.

ವಿವರವಾದ ಅಧಿಸೂಚನೆಯೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.mangaloreuniversity.ac.in ನಿಂದ ಡೌನ್‌ಲೋಡ್ ಮಾಡಬಹುದು.

ನಿಗದಿತ ಅರ್ಜಿ ಶುಲ್ಕವನ್ನು ಚಲನ್ ಮೂಲಕ ಅಥವಾ ಡಿ.ಡಿ. ಮೂಲಕ ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಹೆಸರಿಗೆ ಪಾವತಿಸಿ, ಚಲನ್/ಡಿ.ಡಿ.ಯನ್ನು ಅರ್ಜಿಯ ಜೊತೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದ ಮುಂಚಿತವಾಗಿ ಕಳುಹಿಸಿ ಕೊಡುವುದು.

**<u>ಸಾಮಾನ್ಯ ಸೂಚನೆಗಳು:</u>**

1. ಕರ್ನಾಟಕ ಸಾರ್ವಜನಿಕ ಉದ್ಯೋಗ(ಹೈದ್ರಾಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ ಪ್ರಮಾಣ ಪತ್ರಗಳ ನೀಡಿಕೆ) 2013ರನ್ವಯ ನೇಮಕಾತಿಯಲ್ಲಿ ಸ್ಥಳೀಯ ಅಭ್ಯರ್ಥಿಯೆಂದು ಮೀಸಲಾತಿಯನ್ನು ಕ್ಲೇಮ್ ಮಾಡುವ ವ್ಯಕ್ತಿಯು ಸಕ್ಷಮ ಪ್ರಾಧಿಕಾರವು ನೀಡುವ ನಿಗದಿತ ಅರ್ಹತಾ ಪ್ರಮಾಣ ಪತ್ರವನ್ನು ಪಡೆದುಕೊಂಡಿರತಕ್ಕದ್ದು ಹಾಗೂ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು.
2. ಮೀಸಲಾತಿಯ ಸೌಲಭ್ಯವನ್ನು ಪಡೆದುಕೊಳ್ಳುವ ಅಭ್ಯರ್ಥಿಗಳು ತಮ್ಮ ಜಾತಿ ಪ್ರಮಾಣಪತ್ರಗಳನ್ನು ತಹಶೀಲ್ದಾರರು ಅಥವಾ ತತ್ಸಮಾನ ಸಕ್ಷಮ ಪ್ರಾಧಿಕಾರಕ್ಕೆ ಕಡಿಮೆ ಇಲ್ಲದ ಅಧಿಕಾರಿಗಳಿಂದ ಸದರಿ ನೇಮಕಾತಿ ಅಧಿಸೂಚನೆ ಪ್ರಕಟವಾದ ದಿನಾಂಕದಿಂದ ಒಂದು ವರ್ಷದೊಳಗಿನ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿರತಕ್ಕದ್ದು. ಹಾಗೂ ಜಾತಿ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಲಗತ್ತಿಸುವುದು.
3. ಅರ್ಜಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್:www.mangaloreuniversity.ac.in ನಿಂದ ಡೌನ್‌ಲೋಡ್ ಮಾಡಿಕೊಂಡು ಭರ್ತಿಮಾಡಿ ನಿಗದಿತ ಶುಲ್ಕದೊಂದಿಗೆ ಸಲ್ಲಿಸುವುದು.
4. ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸುವುದು.
5. ಸಂದರ್ಶನಕ್ಕೆ ಹಾಜರಾಗುವ ಅಥವಾ ನೇಮಕಾತಿಯ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಸಂದರ್ಭದಲ್ಲಿ ದಿನಭತ್ಯೆ/ಪ್ರಯಾಣ ಭತ್ಯೆಯನ್ನು ವಿಶ್ವವಿದ್ಯಾನಿಲಯವು ಭರಿಸುವುದಿಲ್ಲ.
6. ಆಯ್ಕೆಯಾದ ಅಭ್ಯರ್ಥಿಗಳು ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಟ್ಟ ಸ್ನಾತಕೋತ್ತರ ಕೇಂದ್ರ/ಘಟಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು.
7. ಅರ್ಜಿಯಲ್ಲಿ ನೀಡಿರುವ ವಿಳಾಸವು ಅಂತಿಮವಾಗಿರುತ್ತದೆ. ನಂತರ ವಿಳಾಸ ಬದಲಾವಣೆ ಮಾಡಲು ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
8. ಸೇವೆಯಲ್ಲಿರುವ ಅಭ್ಯರ್ಥಿಗಳು ಸೇವಾ ಪ್ರಾಧಿಕಾರದ ಮುಖಾಂತರ ಅರ್ಜಿ ತಲುಪಬೇಕಾದ ಕೊನೆಯ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸುವುದು.
9. ಕರ್ನಾಟಕ ರಾಜ್ಯದ ಅಭ್ಯರ್ಥಿಗಳು ಮಾತ್ರ ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
10. ಪರಿಶಿಷ್ಟ ಜಾತಿ/ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ ಹುದ್ದೆಗಳಿಗೆ ಬೇರೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
11. ಅಭ್ಯರ್ಥಿಗಳು ತಮ್ಮ ಅರ್ಜಿಗಳೊಂದಿಗೆ ಹತ್ತು ಪ್ರತಿಗಳಲ್ಲಿ ಲಗತ್ತಿಸಿರುವ ಅರ್ಹತಾ ಪ್ರಮಾಣ ಪತ್ರ/ಜಾತಿಪ್ರಮಾಣ ಪತ್ರ/ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ/ಕನ್ನಡ ಮಾಧ್ಯಮ ಪ್ರಮಾಣ ಪತ್ರ/ಅಂಕಗಳ ಪಟ್ಟಿ/ಸೇವಾ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಹಿಂದಿರುಗಿಸಲಾಗುವುದಿಲ್ಲ.
12. ಅರ್ಜಿ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವುದಿಲ್ಲ.
13. ನಿಗದಿಪಡಿಸಿದ ದಿನಾಂಕದ ನಂತರ ತಲುಪಿದ, ಅಪೂರ್ಣವಾಗಿರುವ ಮತ್ತು ನಿಗದಿತ ನಮೂನೆಯಲ್ಲಿರದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ಈ ವಿಷಯದಲ್ಲಿ ಮುಂದಿನ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
14. ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಪ್ರಭಾವ ಬೀರುವುದು ಅಭ್ಯರ್ಥಿಯನ್ನು ಅನರ್ಹಗೊಳಿಸುತ್ತದೆ.
15. ಈ ಅಧಿಸೂಚನೆಯಲ್ಲಿ ಪ್ರಕಟಿಸಿದ ಯಾವುದೇ ಹುದ್ದೆಗಳನ್ನು ತುಂಬುವ ಇಲ್ಲವೇ ತುಂಬದಿರುವ ಅಧಿಕಾರವು ವಿಶ್ವವಿದ್ಯಾನಿಲಯಕ್ಕೆ ಸೇರಿದೆ.
16. ಆ0ಯ್ಕೆ0ಯಾದ ಅಭ್ಯರ್ಥಿಗಳು ಸರಕಾರದ ಆದೇಶ ಸಂ. ಎಫ್‌ಡಿ(ಎಸ್‌ಪಿಎಲ್)04 ಪಿಇಟಿ 2005, ಬೆಂಗಳೂರು, ದಿನಾಂಕ 30.03.2006ರ ಹೊಸ ವಿಶ್ರಾಂತಿ ವೇತನ 0ಯೋಜನೆ (Pension Scheme)0ಯ ಹಾಗೂ ಈ ಬಗ್ಗೆ ಸರಕಾರವು ಹೊರಡಿಸಿರುವ ಇತರ 0ಯಾವುದೇ ಆದೇಶಗಳ ಆಡಳಿತಕ್ಕೆ ಒಳಪಟ್ಟಿರುತ್ತಾರೆ.
17. ಆಯ್ಕೆಯಾದ ಅಭ್ಯರ್ಥಿಗಳು ಎರಡು ವರ್ಷಗಳ ಪರಿವೀಕ್ಷಣಾವಧಿಯಲ್ಲಿರುತ್ತಾರೆ. ವಿಶ್ವವಿದ್ಯಾನಿಲಯವು ಬಯಸಿದಲ್ಲಿ ಅದನ್ನು ಮುಂದೂಡಬಹುದು.

ಆದೇಶದ ಮೇರೆಗೆ,

ಸಹಿ/–

ಕುಲಸಚಿವರು.

ರಿಗೆ,

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು 560 001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, 5ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ, ಸಂ. 39, ಯುನೈಟೆಡ್ ಮೆನ್ಷನ್, 3ನೇ ಮಹಡಿ, ಎಂ.ಜಿ. ರಸ್ತೆ, ಬೆಂಗಳೂರು–1.
5. ಭಾರತದ ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರಿಗೆ – ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
6. ನಿಲಯ ನಿರ್ದೇಶಕರು, ಆಕಾಶವಾಣಿ ಕೇಂದ್ರ, ಮಂಗಳೂರು/ಬೆಂಗಳೂರು/ಭದ್ರಾವತಿ/ಮೈಸೂರು/ ಧಾರವಾಡ/ ಮಡಿಕೇರಿ/ಗುಲ್ಬರ್ಗಾ–ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
7. ನಿರ್ದೇಶಕರು, ದೂರದರ್ಶನ ಕೇಂದ್ರ, ದೂರದರ್ಶನ ಭವನ, ಜೆ. ಸಿ. ನಗರ, ಬೆಂಗಳೂರು ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವಂತೆ ಕೋರಿ.
8. ಹಣಕಾಸು ಅಧಿಕಾರಿ/ಸರ್ಕಾರಿ ಲೆಕ್ಕ ಪರಿಶೋಧಕರು/ ಕುಲಸಚಿವರು(ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
9. ಗ್ರಂಥಪಾಲಕರು, ವಿಶ್ವವಿದ್ಯಾನಿಲಯದ ಗ್ರಂಥಾಲಯ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ– ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
10. ಸಂಯೋಜಕರು, DUIMS, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ –ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
11. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ– ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
12. ಜಿಲ್ಲಾ ವಾರ್ತಾ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು/ಕೊಡಗು ಜಿಲ್ಲೆ, ಮಡಿಕೇರಿ/ಉಡುಪಿ ಜಿಲ್ಲೆ, ಉಡುಪಿ–ಪ್ರಕಟಣೆಯನ್ನು ಉಚಿತವಾಗಿ ಪ್ರಕಟಿಸುವ ಸಲುವಾಗಿ.
13. ಸಹ ನಿರ್ದೇಶಕರು, ಪರಿಶಿಷ್ಟ ಜಾತಿ/ ಪಂಗಡದ ರಾಜ್ಯ ವಿಶೇಷ ಉದ್ಯೋಗ ವಿನಿಮಯ, ನಂ. 135, ಬ್ರಿಗೇಡ್ ರಸ್ತೆ, ಬೆಂಗಳೂರು –560025.
14. ಉಪಮುಖ್ಯಸ್ಥರು, ಮಂಗಳೂರು ವಿಶ್ವವಿದ್ಯಾನಿಲಯದ ಉದ್ಯೋಗ ಮತ್ತು ಮಾಹಿತಿ ಕೇಂದ್ರ, ಮಂಗಳಗಂಗೋತ್ರಿ.
15. ಕರ್ನಾಟಕ ರಾಜ್ಯ ದಲಿತ ವರ್ಗಗಳ ಒಕ್ಕೂಟ, ಬಾಪೂಜಿ ವಿದ್ಯಾರ್ಥಿ ನಿಲಯ, ಆದಿಜಾಂಬವ ಹೋಟೇಲ್, ಮಾಗಡಿ ರಸ್ತೆ, ಬೆಂಗಳೂರು–560 023.
16. ಪ್ರಭಾರ ನಿರ್ದೇಶಕರು, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಕುಶಾಲನಗರ, ಸೋಮವಾರ ಪೇಟೆ ತಾಲೂಕು, ಕೊಡಗು–ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
17. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು/ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ–ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
18. ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ – ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.
19. ಕುಲಪತಿಯವರ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
20. ಕುಲಸಚಿವರ ಕಚೇರಿಯ ಎಲ್ಲಾ ಅಧೀಕ್ಷಕರುಗಳು, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
21. ಕಚೇರಿ ಸೂಚನಾ ಫಲಕಕ್ಕೆ.